# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ನಂಬ್ರಃ 1221-2016**

ಸರ್ಕಾರದ ಪರ
ಕೋಟಾ ಠಾಣಾ ಪೊಲೀಸರು. --- ಪಿರ್ಯಾದಿದಾರರು

-ಮತ್ತು-

1. ರಮೇಶ್ ಮೊಗವೀರ, 38 ವರ್ಷ,
ತಂದೆಃ ದಿ. ಬಸವಾ ಮಾರಕಾಲ,

2. ಗಣೇಶ್ ಮೊಗವೀರ, 27 ವರ್ಷ,
ತಂದೆಃ ತಂದೆಃ ದಿ. ಬಸವಾ ಮಾರಕಾಲ,

3. ಶ್ರೀನಿವಾಸ್, 35 ವರ್ಷ,
ತಂದೆಃ ದಿ. ಬಸವಾ ಮಾರಕಾಲ,

4. ಮಮತಾ, 27 ವರ್ಷ,
ಗಂಡಃ ಮಂಜುನಾಥ,

1 ರಿಂದ 4 ನೇಯವರ
ವಾಸಃ ವೆಂಕು ಕಂಪೌಂಡ್,
ತೆಂಕಬೆಟ್ಟು, ಕೆದೂರು ಗ್ರಾಮ,
ಕುಂದಾಪುರ ತಾಲೂಕು.

5. ಮಂಜುನಾಥ, 35 ವರ್ಷ,
ತಂದೆಃ ದಿ. ಸೂರ ಮಾರಕಾಲ,
ವಾಸಃ ಸೋನಿ ಅಜ್ಜಿ ಮನೆ, ಮಣೂರು,
ಪಡುಕೆರೆ, ಮಣೂರು ಗ್ರಾಮ,
ಉಡುಪಿ ತಾಲೂಕು. --- ಆರೋಪಿತರು

**ಃದೋಷಾರೋಪಣೆಃ**

ಶ್ರೀಮತಿ ನಾಗರತ್ನಮ್ಮ ಬಿ.ಎ.ಎಲ್., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ

1 ನೇ ಆರೋಪಿತರಾದ ನೀವು ಕೋಟಾ ಪೊಲೀಸ್ ಠಾಣಾ ಅ.ಕ್ರ 172/2015 ಕಲಂ 379 IPC ಪ್ರಕರಣದಲ್ಲಿ ಆರೋಪಿತನಾಗಿದ್ದು ದಿನಾಂಕ 19.11.2015 ರಂದು ಬೆಳಿಗ್ಗೆ ಸಾಕ್ಷಿ 1 ಮತ್ತು 2 ನೇಯವರು 1 ನೇ ಆಪಾದಿತರಾದ ನಿಮ್ಮ ಪತ್ತೆಯ ಬಗ್ಗೆ ವಿಶೇಷ ಕರ್ತವ್ಯದ ಮೇಲೆ ತೆರಳಿ ನೀವು ಹುಣ್ಸೆಮಕ್ಕಿ ಎಸ್.ಡಿ.ಸಿ.ಸಿ. ಬ್ಯಾಂಕ್ ಬಳಿ ಇರುವುದಾಗಿ ದೊರೆತ ವರ್ತಮಾನದಂತೆ ಅಲ್ಲಿಗೆ ತೆರಳಿ 1 ನೇ ಆಪಾದಿತರಾದ ನಿಮ್ಮ ಮೇಲೆ ಇದ್ದ ಪ್ರಕರಣದ ಬಗ್ಗೆ ತಿಳಿಸಿ ನಿಮ್ಮನ್ನು ವಶಕ್ಕೆ ಪಡೆದು ಸಾಕ್ಷಿ 3 ನೇಯವರ ಆಟೋ ರಿಕ್ಷಾ ಕೆಎ-20-ಸಿ-3375 ರಲ್ಲಿ 1 ನೇ ಆಪಾದಿತರಾದ ನಿಮ್ಮನ್ನು ಕುಳ್ಳಿರಿಸಿ ಸಾಕ್ಷಿ 1 ಮತ್ತು 2 ನೇಯವರು ಜೊತೆಯಲ್ಲಿ ಕುಳಿತುಕೊಂಡು ಸಾಕ್ಷಿ 3 ನೇಯವರು ಆಟೋ ರಿಕ್ಷಾವನ್ನು ಚಲಾಯಿಸಿಕೊಂಡು ಕೋಟಾ ಠಾಣೆಗೆ ಬರುತ್ತಿರುವಾಗ ತೆಕ್ಕಟ್ಟೆ ಹುಣ್ಸೆಮಕ್ಕಿ ಟಾರು ರಸ್ತೆಯಲ್ಲಿ ಕುಂದಾಪುರ ತಾಲೂಕು ಕೆದೂರು ಗ್ರಾಮದ ಕೆದೂರು ರೈಲ್ವೆ ಸೇತುವೆ ಬಳಿ ತಲುಪಿದಾಗ ಬೆಳಿಗ್ಗೆ ಸುಮಾರು 10.00 ಗಂಟೆಗೆ 1 ನೇ ಆಪಾದಿತರಾದ ನೀವು ಏಕಾಏಕಿ ಸಾಕ್ಷಿ 1 ಮತ್ತು 2 ನೇಯವರನ್ನು ದೂಡಿ ರಿಕ್ಷಾವನ್ನು ಪಲ್ಟಿ ಮಾಡಲು ಪ್ರಯತ್ನಪಟ್ಟು ಸರ್ಕಾರಿ ಕೆಲಸಕ್ಕೆ ಅಡ್ಡಿಯುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 353 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿತರಾದ ನೀವು ಸಾಕ್ಷಿ 1 ನೇಯವರ ಸಮವಸ್ತ್ರವನ್ನು ಹರಿಯಲು ಪ್ರಯತ್ನಿಸಿದ್ದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ನಿಮ್ಮನ್ನು ಹಿಡಿದು ಕುಳ್ಳಿರಿಸಿ ಆಟೋರಿಕ್ಷಾದಲ್ಲಿ ಮುಂದಕ್ಕೆ ಬರುತ್ತಾ ಬೆಳಿಗ್ಗೆ 10.30 ಗಂಟೆ ಸಮಯಕ್ಕೆ ಕೆದೂರು ಗ್ರಾಮದ ತೆಂಕಬೆಟ್ಟು ಎಂಬಲ್ಲಿಗೆ ತಲುಪಿದಾಗ ಆಟೋ ಚಾಲಕರಾದ ಸಾಕ್ಷಿ 3 ನೇಯವರನ್ನು ಏಕಾಏಕಿ ಒಮ್ಮೇಲೆ ದೂಡಿ ರಿಕ್ಷಾದ ಮುಂದಿನ ಗಾಜನ್ನು ಕೈಯಿಂದ ಒಡೆದು ಹಾಕಿದ್ದು ಅವರು ರಿಕ್ಷಾವನ್ನು ನಿಲ್ಲಿಸಿದಾಗ ನೀವು ಬೊಬ್ಬೆ ಹಾಕಿ ಬಿಡಿಸಿಕೊಳ್ಳಲು ಪ್ರಯತ್ನಿಸಿ ಸಾಕ್ಷಿ 1 ನೇಯವರ ಸಮವಸ್ತ್ರದ ಶರ್ಟನ್ನು ಹರಿದು ಹಾಕಿ ಸರ್ಕಾರಿ ಕೆಲಸಕ್ಕೆ ಅಡ್ಡಿಯುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 332 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿದ್ದ 2 ರಿಂದ 5 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ಸಾಕ್ಷಿ 1 ಮತ್ತು 2 ನೇಯವರಿಗೆ ದೊಣ್ಣೆಯಿಂದ ಹೊಡೆದು ಹಾಗೂ ಬಿಡಿಸಲು ಬಂದ ಸಾಕ್ಷಿ 4 ನೇಯರಿಗೂ ದೊಣ್ಣೆಯಿಂದ ಹೊಡೆದು ತೀವ್ರ ತರಹದ ಗಾಯಗೊಳಿಸಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 5 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 1, 4 ಮತ್ತು 5 ನೇ ಆಪಾದಿತರಾದ ನೀವುಗಳು ಸಾಕ್ಷಿ 1 ಮತ್ತು 2 ನೇಯವರಿಗೆ ಕೈಯಿಂದ ಹೊಡೆದು ಕಾಲಿನಿಂದ ತುಳಿದಿದ್ದು ಹಾಗೂ ಬಿಡಿಸಲು ಬಂದ ಸಾಕ್ಷಿ 4 ನೇಯರಿಗೂ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

5. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 5 ನೇ ಆರೋಪಿತರಾದ ನೀವುಗಳು, ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 2 ರಿಂದ 5 ನೇ ಆರೋಪಿತರಾದ ನೀವುಗಳು ಸಾಕ್ಷಿ 1 ಮತ್ತು 2 ನೇಯವರನ್ನುದ್ದೇಶಿಸಿ "1 ನೇ ಆರೋಪಿತನನ್ನು ಬಿಡದಿದ್ದಲ್ಲಿ ಕೊಲ್ಲುವುದಾಗಿ" ಜೀವ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

6. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ1 ರಿಂದ 5 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ ಆ ಪೈಕಿ 1 ನೇ ಆಪಾದಿತರಾದ ನೀವು ಆಟೋರಿಕ್ಷಾದ ಗಾಜನ್ನು ಪುಡಿ ಮಾಡಿ ಸಾಕ್ಷಿ 3 ನೇಯವರಿಗೆ ಸುಮಾರು 2000/- ರೂ. ನಷ್ಟ ಉಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 427 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 28.08.2019

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

RMS